ಉದಯವಾಣಿ
ಕನ್ನಡ ದಿನಪತ್ರಿಕೆ

# ಬೆಂಗಳೂರು ಜೈನ್ ವಿವಿ ಚಾಂಪಿಯನ್

**ನವದೆಹಲಿ:** ಬೆಂಗಳೂರಿನ ಜೈನ್ ವಿಶ್ವ ವಿದ್ಯಾಲಯ ತಂಡ ಉದ್ಘಾಟನಾ ಟಯೋಟಾ ವಿಶ್ವ ವಿದ್ಯಾಲಯ ಕ್ರಿಕೆಟ್ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಭಾನುವಾರ ನಡೆದ ಫೈನಲ್‌ನಲ್ಲಿ 2 ರನ್‌ಗಳಿಂದ ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾ ತಂಡದ ವಿರುದ್ಧ ರೋಚಕ ಜಯ ಸಾಧಿಸಿದ ಜೈನ್ ವಿವಿ ತಂಡ ಪ್ರಶಸ್ತಿ ಎತ್ತಿ ಹಿಡಿಯಿತು.

ಮೊದಲು ಬ್ಯಾಟ್ ಮಾಡಿದ ಜೈನ್ ವಿವಿ 122 ರನ್ ಗಳಿಸಿದರೆ, ತವರಿನ ಅಭಿಮಾನಿಗಳ ನಡುವೆ ಇಸ್ಲಾಮಿಯಾ ತಂಡ 7 ವಿಕೆಟ್‌ಗೆ 120 ರನ್ ಗಳಿಸಲಷ್ಟೇ ಶಕ್ತವಾಯಿತು.

ಆಲ್‌ರೌಂಡ್ ಪ್ರದರ್ಶನ ನೀಡಿದ ಶ್ರೇಯಸ್ ಗೋಪಾಲ್ ಅಜೇಯ 83 ರನ್ ಬಾರಿಸಿದ್ದೂ ಅಲ್ಲದೇ 16 ರನ್ ಗಳಿಗೆ 2 ವಿಕೆಟ್ ಪಡೆದು ಗಮನ ಸೆಳೆದರು. ಜೈನ್ ವಿವಿಗೆ ಇದು ಪ್ರಸಕ್ತ ಸಾಲಿನ ಎರಡನೇ ಪ್ರಶಸ್ತಿಯಾಗಿದೆ.